# ನೆಗೆಟಿವ್ ಪಾತ್ರ ನನಗೆ ಮಾತ್ರ ಪಾಸಿಟಿವ್

**ರೇಖಾ ಸಾಗರ್**
ಉದಯದ 'ದೊಡ್ಮನೆ ಸೊಸೆ'ಯ ಊರ್ವಶಿ

★ *ಊರ್ವಶಿಯ ಪಾತ್ರ ಹೇಗೆನ್ನಿಸುತ್ತಿದೆ?*

ಮೊದಲ ಬಾರಿಗೆ ನಾನು ಊರ್ವಶಿಯಾಗಿ ನೆಗೆಟಿವ್ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಸವಾಲಿನಿಂದ ಕೂಡಿರುವ ಒಳ್ಳೆಯ ಪಾತ್ರ. ಅದಕ್ಕೇ ಅದನ್ನು ಪಾಸಿಟಿವ್ ಆಗಿ ತೆಗೆದುಕೊಂಡಿದ್ದೇನೆ. ಊರ್ವಶಿ ತನ್ನ ಕುಟುಂಬ ಮಾತ್ರ ಚೆನ್ನಾಗಿರಬೇಕು ಎಂದು ಯೋಚಿಸುವ ಸ್ವಾರ್ಥಿ. ದೊಡ್ಡಮ್ಮನ ವಂಶದ ವಾರಸುದಾರಿಕೆ ನಮಗೆ ಇಲ್ಲದಿದ್ದರೂ ಆಸ್ತಿಯನ್ನು ಲಪಟಾಯಿಸಬೇಕು. ದೊಡ್ಡಮ್ಮನಂತೆ ಗತ್ತಿನಿಂದ ಇರಬೇಕು ಎಂದು ಬಯಸುತ್ತೇನೆ.

ನನ್ನ ಪತಿ, ದೊಡ್ಡಮ್ಮನ ತಮ್ಮನ ಮಗ. ಬಾಲ್ಯದಲ್ಲಿ ಅನಾಥನಾದ ಎನ್ನುವ ಕಾರಣಕ್ಕೆ ದೊಡ್ಡಮ್ಮ ಅವರನ್ನು ಕರೆತಂದು ಸಾಕುತ್ತಾರೆ. ದೊಡ್ಡವರಾದ ಮೇಲೂ ಅವರ ಮನೆಯಲ್ಲಿಯೇ ನೆಲೆಸುತ್ತಾರೆ. ನಾನು ಅವರ ಕೈ ಹಿಡಿದಿದ್ದೇನೆ. ದೊಡ್ಡಮ್ಮನ ಸ್ವಂತ ಮೊಮ್ಮಗನಿಗೆ, ನನ್ನ ಮಗಳನ್ನು ಕೊಡಬೇಕು ಎಂದು ಹೊಂಚು ಹಾಕುತ್ತಿದ್ದೇನೆ. ಅದನ್ನು ಯಾರಿಗೂ ತೋರಿಸಿಕೊಳ್ಳದಂತೆ ಗಂಡ– ಮಗಳ ಜೊತೆ ಸೇರಿ ತಂತ್ರವನ್ನು ಹೆಣೆಯುತ್ತಿದ್ದೇನೆ.



★ *ಕಿರುತೆರೆಗೆ ತುಂಬಾ ತಡವಾಯಿತು ಅನ್ನಿಸಲ್ವಾ?*

'ಉಲ್ಟಾಪಲ್ಟಾ'ದಲ್ಲಿ ಚಿಕ್ಕ ಪಾತ್ರದಲ್ಲಿ ನಟಿಸಿದ್ದೆ. ಆಗ ನಮ್ಮ ಕುಟುಂಬ ತೀರ್ಥಹಳ್ಳಿಯಲ್ಲಿತ್ತು. ಓದುವುದು ಬಾಕಿಯಿತ್ತು. ಹಾಗಾಗಿ ಸ್ವಲ್ಪ ದಿನ ನಟಿಸಲು ಆಗಲಿಲ್ಲ. ಇತ್ತೀಚೆಗೆ ಹದಿನೈದು ಸಿನಿಮಾಗಳಲ್ಲಿ ನಟಿಸಿದೆ. ಉದಯದ 'ವೈಶಾಖ'ದ ಮೂಲಕ ಕಿರುತೆರೆಗೆ ಪ್ರವೇಶ ಮಾಡಿದೆ, 'ಬದುಕು' 'ಅಂಬಾರಿ' 'ಅವಳು ಮತ್ತು ಶ್ರಾವಣಿ'ಯಲ್ಲಿ ನಟಿಸಿದ್ದೇನೆ ಎಲ್ಲಾ ಕಡೆ ಮುಗ್ಧ ಸ್ವಭಾವದ ಪಾತ್ರಗಳನ್ನು ನಿರ್ವಹಿಸಿದ್ದೇನೆ.

★ *ಮತ್ತೆ ಸಿನಿಮಾಕ್ಕೆ ಹೋಗುವುದಿಲ್ವಾ?*

ಕನ್ನಡದಲ್ಲಿಯೇ ಅಭಿನಯಿಸಬೇಕು ಎನ್ನುವುದು ನನ್ನ ಸಂಕಲ್ಪ. ಬೇರೆ ಭಾಷೆಗಳಲ್ಲಿ ಅವಕಾಶಗಳು ಸಿಕ್ಕರೂ ನಾನು ನಟಿಸುವುದಿಲ್ಲ. ಭಿನ್ನ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು. ಆಗ ಮಾತ್ರ ನಟನೆ ಮಾಡಿದೆ ಎನ್ನುವ ಸಂತೃಪ್ತಿ ಮೂಡಲು ಸಾಧ್ಯ. ಈವರೆಗೆ ಗ್ಲಾಮರಸ್, ಮಾಡರ್ನ್ ಪಾತ್ರಗಳನ್ನು ಮಾಡಿಲ್ಲ. ಹುಚ್ಚಿ ಪಾತ್ರವನ್ನು ನಿರ್ವಹಿಸಬೇಕು ಎನ್ನುವುದು ನನ್ನ ಬಯಕೆ. ಸಿನಿಮಾ ಆಗಲಿ, ಟಿವಿ ಆಗಲಿ ಎಲ್ಲೇ ಆದರೂ ನಟಿಸುತ್ತೇನೆ. ನಟಿಯಾಗಿ ಉಳಿಯುತ್ತೇನೆ.

★ *ಕಿರುತೆರೆ – ಹಿರಿತೆರೆಗೆ ಹೇಗೆನ್ನಿಸುತ್ತದೆ?*

ಸಿನಿಮಾಗಳಿಗೆ ಹೋಲಿಸಿ ನೋಡಿದರೆ ಧಾರಾವಾಹಿಯಲ್ಲಿಯೇ ಜನಪ್ರಿಯತೆ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಮಾಧ್ಯಮ ತೀವ್ರ ವೇಗವಾಗಿ ಬೆಳೆಯುತ್ತಿದೆ. ಸಿನಿಮಾ ನೋಡುವವರ ಸಂಖ್ಯೆಯೂ ಕಡಿಮೆಯಾಗಿದೆ. ಧಾರಾವಾಹಿಗಳು ಕೂಡ ಅದ್ದೂರಿಯಾಗಿಯೇ ನಿರ್ಮಾಣವಾಗುತ್ತಿವೆ. ಜನರೂ ಕೂಡ ಟಿವಿಯನ್ನು ಹೆಚ್ಚು ನೋಡುತ್ತಾರೆ. ನಮ್ಮನ್ನೂ ಸಹ ಟಿವಿಯ ಮೂಲಕವೇ ಗುರುತಿಸುತ್ತಾರೆ. ನಟಿಯಾಗಿ ಅದೇ ಆಗಬೇಕು ಇದೇ ಆಗಬೇಕು ಎನ್ನುವ ಬಯಕೆ ಇಲ್ಲ.

★ *ನಿಮ್ಮ ಕುಟುಂಬದ ಬೆಂಬಲ ಹೇಗಿದೆ?*

ನನ್ನ ತಂದೆ ಅಣ್ಣಪ್ಪ, ಮೆಸ್ಕಾಂನಲ್ಲಿ ಉದ್ಯೋಗಿಯಾಗಿದ್ದರು. ಈಗ ಅವರು ಇಲ್ಲ. ಅವರು ಇದ್ದಿದ್ದರೆ ಸಿಕ್ಕಾಪಟ್ಟೆ ಖುಷಿ ಪಡುತ್ತಿದ್ದರು. ಶಾಲಾ ದಿನಗಳಲ್ಲಿ ನಾನು ನೃತ್ಯ ಮಾಡುತ್ತಿದ್ದೆ. ನನ್ನ ಕಾರ್ಯಕ್ರಮ ಇದ್ದರೆ ಅವರು ಕಚೇರಿಗೆ ರಜೆ ಹಾಕಿ ನೋಡಲು ಬರುತ್ತಿದ್ದರು. ನನ್ನನ್ನು ಎತ್ತಿ ಮುದ್ದಾಡುತ್ತಿದ್ದರು. ಅಮ್ಮ ಗೀತಾ, ಅವರೇ ನನ್ನ ವೃತ್ತಿ ಬದುಕಿಗೆ ಮಾರ್ಗದರ್ಶಕರು. ಅಷ್ಟರ ಮಟ್ಟಿಗೆ ಅವರು ನನ್ನನ್ನು ಬೆಂಬಲಿಸುತ್ತಾರೆ. ನನ್ನ ಕಾಸ್ಟ್ಯೂಮ್ ಮತ್ತು ಡ್ರೆಸ್ ಬಗ್ಗೆಯೂ ಅವರು ಯೋಚಿಸುತ್ತಾರೆ. ಅಷ್ಟು ಮಾತ್ರವಲ್ಲ. ಮನೆಗೆ ಬಂದಾಗ ನನ್ನ ಮುಖ ನೋಡಿಯೇ ನನ್ನ ಮನಸ್ಥಿತಿ ಅರಿತು ಸ್ಪಂದಿಸುತ್ತಾರೆ. ನೋವಿರಲಿ– ನಲಿವಿರಲಿ ಎಲ್ಲದನ್ನೂ ನಾನು ತಪ್ಪದೆ ನನ್ನ ಅಮ್ಮನ ಜೊತೆ ಹಂಚಿಕೊಳ್ಳುತ್ತೇನೆ.

■ ರಾಘವೇಂದ್ರ